



## ಗಣೇಶ್ ಕೈಯಲ್ಲಿ ಬುಗುರಿ!

'ಗಾಳಿಪಟ' ಹಾರಿಸಿದ ಗಣೇಶ್ ಈಗ 'ಬುಗುರಿ' ಆಡಿಸುವ ಉತ್ಸಾಹದಲ್ಲಿದ್ದಾರೆ. ಈ ಚೆಲ್ಲಾಟ–ಹುಡುಗಾಟ ಎಲ್ಲವೂ ಸಿನಿಮಾಕ್ಕಾಗಿ.

'ಬುಗುರಿ' ಗಣೇಶ್ ಅಭಿನಯಿಸುತ್ತಿರುವ ಹೊಸ ಚಿತ್ರದ ಹೆಸರು. ಎಂ.ಡಿ. ಶ್ರೀಧರ್ ನಿರ್ದೇಶಿಸುತ್ತಿರುವ ಈ ಚಿತ್ರದ ಫೋಟೊ ಶೂಟ್ ಈಗಾಗಲೇ ಮುಗಿದಿದೆ. ಶೂಟಿಂಗ್ ಜೂನ್ 7ರಿಂದ ಶುರುವಾಗಲಿದೆ. ಎಲ್ಲವೂ ಅಂದುಕೊಂಡಂತೆ ನಡೆದರೆ ದಸರೆಯ ವೇಳೆಗೆ 'ಬುಗುರಿ' ಚಿತ್ರಮಂದಿರಗಳಲ್ಲಿ ಇರುತ್ತದೆ. ಶ್ರೀಧರ್ ಅವರು ಹೇಳುವಂತೆ ಇದು ಆಟ–ಹುಡುಗಾಟದ ಕಥನ; ವಿಶೇಷವಾಗಿ ಪ್ರೇಮ ಹಾಗೂ ಜೀವನಪ್ರೇಮದ ಕುರಿತಾದ ಸಿನಿಮಾ. ಗಣೇಶ್‌ರ ಇಮೇಜಿಗೆ ತಕ್ಕಂತೆ ಕಥೆ ಇದೆಯಂತೆ. ಇಷ್ಟು ಮಾತ್ರವಲ್ಲ, ಇದೊಂದು ಸ್ವಮೇಕ್ ಸಿನಿಮಾ!

ಗಣೇಶ್ ಹಾಗೂ ಶ್ರೀಧರ್ ಈ ಮೊದಲು 'ಚೆಲ್ಲಾಟ' ಹಾಗೂ 'ಕೃಷ್ಣ' ಚಿತ್ರಗಳಲ್ಲಿ ಒಟ್ಟಿಗೆ ಕೆಲಸ ಮಾಡಿದವರು. 'ಚೆಲ್ಲಾಟ' ಗೆಲ್ಲದಿದ್ದರೂ, 'ಮುಂಗಾರು ಮಳೆ' ಬೆನ್ನಿಗೆ ತೆರೆ ಕಂಡ 'ಕೃಷ್ಣ' ಸಿನಿಮಾ ಇಬ್ಬರಿಗೂ ಹೆಸರಿಗೂ ತಂದಿತ್ತು. 'ಕೃಷ್ಣ'ಲೀಲೆಯ ಆರು ವರ್ಷಗಳ ತರುವಾಯ ಈ ಜೋಡಿ 'ಬುಗುರಿ' ನೆಪದಲ್ಲಿ ಮತ್ತೆ ಒಂದಾಗಿದೆ.

ಹೊಸ ಚಿತ್ರಕ್ಕಾಗಿ ಗಣೇಶ್ ಸಾಕಷ್ಟು ಪೂರ್ವಸಿದ್ಧತೆ ನಡೆಸಿದ್ದಾರಂತೆ. ಹಾಗೆಂದು ಅವರು ಬುಗುರಿಯಾಟದ ತಾಲೀಮು ನಡೆಸಿದ್ದಾರೆ ಎಂದುಕೊಂಡರೆ ನಿಮ್ಮ ಊಹೆ ತಪ್ಪು. 'ಬುಗುರಿ'ಗಾಗಿ ಕುದುರೆ ಸವಾರಿ ಹಾಗೂ ಸ್ಕೇಟಿಂಗ್ ಅಭ್ಯಾಸ ಅವರು ನಡೆಸಿದ್ದಾರೆ. ಇದರ ಜೊತೆಗೆ ಮತ್ತಷ್ಟು ತೆಳ್ಳಗೂ ಆಗಿದ್ದಾರೆ.



## ಊಟಕ್ಕೆ ಮೊದಲು...

ಅಡುಗೆ ಮಾಡುವುದರ ಬಗ್ಗೆ ಗಂಡಸರು ಮೂಗು ಮುರಿಯುವುದು ಹೆಚ್ಚು. ಆದರೆ, ಪ್ರಕಾಶ್ ರೈ ಎಲ್ಲರಂಥವರಲ್ಲ. ಅವರಿಗೆ ಅಡುಗೆಯೆಂದರೆ ಇಷ್ಟ. ರಸಕವಳ ಚಪ್ಪರಿಸುವುದರಲ್ಲಿ ಮಾತ್ರವಲ್ಲ, ರಸಪಾಕ ಸಿದ್ಧಪಡಿಸುವುದರಲ್ಲೂ ಅವರಿಗೆ ಆಸಕ್ತಿಯಿದೆ. ಅಂದ ಹಾಗೆ, ರೈ ಅವರ ಪ್ರಕಾರ ಒಳ್ಳೆಯ ಅಡುಗೆ ಮಾಡುವುದೆಂದರೆ– ಒಳ್ಳೆಯ ಸಿನಿಮಾ ಮಾಡುವುದು!

'ಒಗ್ಗರಣೆ' ಸಿನಿಮಾ ರೂಪುಗೊಂಡಿರುವುದರ ತಾತ್ವಿಕತೆಯೂ ಅಷ್ಟೇ. ಅವರ ಪ್ರಕಾರ 'ಇದೊಂದು ಅನುಬಂಧ. ಜೀವನಪ್ರೀತಿಯ ರೂಪಕ'. ಮತ್ತೂ ಮುಂದುವರಿದು, 'ಒಗ್ಗರಣೆ ಅಮ್ಮನ ಕೈರುಚಿಯನ್ನು ನೆನಪಿಸುವಂಥ ಸಿನಿಮಾ' ಎಂದು ಬಣ್ಣಿಸುತ್ತಾರೆ. ಹೀಗೆ, ಹಟಕ್ಕೆ ಬಿದ್ದು ಭಾವನೆಗಳ ಜೊತೆ ಆಡಲಿಕ್ಕೆ ಹೊರಟಿರುವ ರೈ 'ಒಗ್ಗರಣೆ' ಸಿನಿಮಾದ ನಿರ್ದೇಶಕರೂ ಹೌದು. 'ನಾನೂ ನನ್ನ ಕನಸು' ಚಿತ್ರದ ನಂತರ ಅವರು ಕನ್ನಡ ಚಿತ್ರರಂಗದಲ್ಲಿ ಕೈಗೊಂಡ ಹೊಸ ಪ್ರಯೋಗ ಈ ಅಡುಗೆ ಘಮ. ಅಡುಗೆಯ ಅನುಬಂಧದ ಮೂಲಕ ವ್ಯಕ್ತಿಯೊಬ್ಬ ಏಕಾಂತದಿಂದ ಲೋಕಾಂತದತ್ತ ಸಾಗುವ ಕಥೆ ಚಿತ್ರದ್ದು.

ಸಾಹಿತ್ಯ, ಸಿನಿಮಾದ ಗಂಭೀರ ವಿದ್ಯಾರ್ಥಿಯಾದ ಪ್ರಕಾಶ್ ರೈ ಅವರಿಗೆ ತಮ್ಮ ಯೋಚನೆಗಳನ್ನು ಸಿನಿಮಾ ಮೂಲಕ ಹಂಚಿಕೊಳ್ಳುವ ಅಭಿವ್ಯಕ್ತಿಯ ಮಾಧ್ಯಮವಾಗಿ ನಿರ್ದೇಶನ ತೋರಿದೆ. ನಿರ್ದೇಶಕನಿಗೆ ದೊರೆಯುವ ಸ್ವಾತಂತ್ರ್ಯ ಹಾಗೂ ಸವಾಲು ಎರಡೂ ಅವರಿಗೆ ಇಷ್ಟವಾಗಿವೆ. ಅಂದ ಹಾಗೆ, ಇಳಯರಾಜ ಈ ಚಿತ್ರದ ಸಂಗೀತ ನಿರ್ದೇಶಕರು.

'ಒಗ್ಗರಣೆ' ಚಿತ್ರ ಜೂನ್ ಮೊದಲ ವಾರದಲ್ಲಿ ತೆರೆ ಕಾಣಲಿದೆ. ಅಂದರೆ, ತಮ್ಮ ಸಿನಿಮಾದ ಮೂಲಕ ಪ್ರಕಾಶ್ ರೈ ಕನ್ನಡಿಗರೊಂದಿಗೆ ಮಾತನಾಡಲು ಮುಂದಾಗಿದ್ದಾರೆ. ಸಹೃದಯರು 'ಹೂಂ' ಎನ್ನುತ್ತ ಮಾತಿಗೆ ಕೂರುವುದು ಬಾಕಿಯಷ್ಟೇ.

■ ರಘು